- 13 -

**ಕಂದಾಯ ಇಲಾಖೆ**

**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು – 575 001**

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ, ಪುನರ್ ನಿರ್ಮಾಣ ಕಾಯ್ದೆ 2013ರ (ದಿನಾಂಕ: 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕಲಂ 11(1) ರಂತೆ ಮಾಡಿದ ಅಧಿಸೂಚನೆ.**

---

ಎಲ್.ಎ.ಕ್ಯೂ.ಎಸ್.ಆರ್.104/2017/12645/ಬಿ1 ದಿನಾಂಕ: 01/01/2019

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದ ಎಡಿಬಿ ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಮೇಲ್ಮಟ್ಟ ಜಲ ಸಂಗ್ರಹಗಾರ ನಿರ್ಮಾಣ ಕಾಮಗಾರಿಗಾಗಿ <u>ಮಂಗಳೂರು ತಾಲೂಕು ಬೋಳೂರು ಬಿ ಗ್ರಾಮದಲ್ಲಿ ಒಟ್ಟು 0.35</u> ಎಕ್ರೆ ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನಗೊಳಿಸಲು ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಲು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಕಂಡುಬಂದಿದ್ದು, ಭೂಸ್ವಾಧೀನಕ್ಕೆ ಒಳಪಡುವ ಗ್ರಾಮದಲ್ಲಿ ಅಗತ್ಯವಿರುವ ಜಮೀನಿನ ಬಗ್ಗೆ ಭೂಸ್ವಾಧೀನ ಕಾಯ್ದೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 4 ಹಾಗೂ ಭೂಸ್ವಾಧೀನ ನಿಯಮಗಳು 2015 (ಕರ್ನಾಟಕ) ನಿಯಮ 5 ರನ್ವಯ ಸರ್ಕಾರದ ಅಧಿಸೂಚಿತ ಸಂಸ್ಥೆಯಾದ Technical Consultancy Services Organization of Karnataka ಇವರಿಂದ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನದ ವರದಿಯನ್ನು ಪಡೆಯಲಾಗಿದೆ. ಈ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನವು ಸರಕಾರದ ಆದೇಶ ಸಂಖ್ಯೆ ದಿನಾಂಕ ಕಂಇ 11 ಎಸ್‌ಆರ್ ಆರ್ 2017 ದಿನಾಂಕ 13-06-2018 ರಂತೆ ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ. ಆದ್ದರಿಂದ ಈ ಕೆಳಕಂಡ ಹಿಡುವಳಿ ಜಮೀನುಗಳನ್ನು ಸ್ವಾಧೀನಪಡಿಸಲು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ (ದಿನಾಂಕ 01.01.2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕಲಂ 11 ಹಾಗೂ ಭೂಸ್ವಾಧೀನ ನಿಯಮಗಳು 2015 (ಕರ್ನಾಟಕ) ನಿಯಮ 20 ರನ್ವಯ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಕಾನೂನಿನ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಕಾರ್ಯಪಾಲನೆ ಅಧಿಕಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಮಹಾನಗರಪಾಲಿಕೆ, ಮಂಗಳೂರು ಇವರಿಗೆ ನೀಡಲಾಗಿದೆ. ಸದರಿ ಕಾಯ್ದೆಯ ಕಲಂ 43ರ ಮೇರೆಗೆ ಪುನರ್ವಸತಿ, ಪುನರ್ ನಿರ್ಮಾಣ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ಅಪರ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ನೀಡಲಾಗಿದೆ.

2013ರ ಕಾಯ್ದೆಯ ಕಲಂ 15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣೆಗಳಿದ್ದಲ್ಲಿ, ಆಕ್ಷೇಪಣೆಯನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗೆ ವಿಶೇಷ ಭೂಸ್ವಾಧೀನಾಧಿಕಾರಿ, ಮಹಾನಗರಪಾಲಿಕೆ, ಮಂಗಳೂರು ಇವರಿಗೆ ಲಿಖಿತವಾಗಿ ಸಲ್ಲಿಸಬೇಕು. ನಂತರ ಬಂದ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ.

ಈ ಜಮೀನುಗಳ ಭೂಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಈ ಬಗ್ಗೆ ಭೂಸ್ವಾಧೀನ ಕಾಯ್ದೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 11(4) ರ ಮೇರೆಗೆ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸ್ವಾಧೀನಗೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೆ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

-14-

ಜಿಲ್ಲಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

-15-

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದ ಎಡಿಬಿ ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಬಗ್ಗೆ ಮೇಲ್ಮಟ್ಟ ಜಲ ಸಂಗ್ರಹಗಾರ ನಿರ್ಮಾಣ ಕಾಮಗಾರಿಗಾಗಿ ಭೂಸ್ವಾಧೀನವಾಗಲಿರುವ ಜಮೀನಿನ ವಿವರ

| ಕ್ರಮ ಸಂಖ್ಯೆ | ಭೂಸ್ವಾಧೀನವಾಗುವ ಜಮೀನಿನ ಖಾತೆದಾರರ ಹೆಸರು | ಸ.ನಂ | ಹಿಸ್ಸಾ ನಂ | 11(1) ಭೂಸ್ವಾಧೀನದ ವಿಸ್ತೀರ್ಣ | | | | | ಚಕ್ಕುಬಂದಿ | | | |
|---|---|---|---|---|---|---|---|---|---|---|---|---|
| | | | | ಭೂಸ್ವಾಧೀನವಾಗುವ ಒಟ್ಟು ವಿಸ್ತೀರ್ಣ | ಖರಾಬು | ಖರಾಬು ವಜಾ ಜಾತಾ ಉಳಿಕೆ ವಿಸ್ತೀರ್ಣ | ತರಹೆ | ದರ | ಉತ್ತರ | ಪೂರ್ವ | ದಕ್ಷಿಣ | ಪಶ್ಚಿಮ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| ಜಿಲ್ಲೆ: ದ.ಕ | | ತಾಲೂಕು: ಮಂಗಳೂರು | | | | ಹೋಬಳಿ: ಮಂಗಳೂರು ಎ | | | | ಗ್ರಾಮ: ಬೋಳೂರು ಬಿ | | |
| 1 | ಮೇ। ಚಿತ್ರಕಲಾ ಇನ್ ವೆಸ್ಟ್ ಮೆಂಟ್ ಟ್ರೇಡ್ ಬಿಸ್ಸ್ ನೆಸ್ ಫೈನಾನ್ಸ್ ಲಿಮಿಟೆಡ್ | 12/1ಎಪಿ1 | | 0.35 | | 0.35 | ಪುಂಜ | - | ಸರ್ವೆ ಲೈನು | ಸ.ಡಿ. ಲೈನು | ಇದೇ ಸ.ಡಿ. ಅಂಶ | ಇದೇ ಸ.ಡಿ. ಅಂಶ |
| | | | ಒಟ್ಟು | 0.35 | | 0.35 | | | | | | |

ಪಿ.ಆರ್. 32 ಬಿ.ಪ್ರ (10)

ಜಿಲ್ಲಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು